**ದಿನಾಂಕಃ 25.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮಗ ಶಿವಗಂಗೆ ಪ್ರೌಢ ಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದನು. ಆತನಿಗೆ 14 ವರ್ಷ ಆಗಿತ್ತು. ನನ್ನ ಮನೆಯಿಂದ ಮಗನ ಶಾಲೆಗೆ ಸುಮಾರು ಎರಡೂವರೆ ಕಿಲೋ ಮೀಟರ್ ಆಗುತ್ತದೆ. ನನ್ನ ಮಗ ನಡೆದುಕೊಂಡು ಶಾಲೆಗೆ ಹೋಗುತ್ತಿದ್ದನು. ಧನುಷ್ ಮತ್ತು ಕುಶಾಲ್ ಎಂಬುವವರು ನನ್ನ ಮಗ ಹೋಗತ್ತಿದ್ದ ಶಾಲೆಯಲ್ಲಿಯೇ ವ್ಯಾಸಂಗ ಮಾಡುತ್ತಿದ್ದರು. ಶಾಲೆ ಸಂಜೆ 4 ಗಂಟೆಗೆ ಬಿಡುತ್ತದೆ. ಅಪಘಾತದ ಬಗ್ಗೆ ಸಾರ್ವಜನಿಕರು ಸಂಜೆ 5.00 ಗಂಟೆಯ ಸಮಯದಲ್ಲಿ ನನ್ನ ಮಗಳಿಗೆ ಮಾಹಿತಿ ನೀಡಿದ್ದು, ನನ್ನ ಮಗಳು ನನಗೆ ಮಾಹಿತಿ ನೀಡಿರುತ್ತಾಳೆ. ಅಪಘಾತದ ಬಗ್ಗೆ ನಾಗರಾಜು ಎಂಬುವವರು ದೂರನ್ನು ನೀಡಿರುತ್ತಾರೆ. ನಾಗರಾಜು ಎಂಬುವವರು ಬೈಕಿನ ಮಧ್ಯದಲ್ಲಿ ಕುಳಿತಿದ್ದ ಧನುಷ್ ರವರ ತಂದೆ ಎಂದರೆ ಸರಿ. ದೂರಿನ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ವಾಹನವನ್ನು ನನ್ನ ಮಗ ನಿತಿನ್ ಚಾಲನೆ ಮಾಡುತ್ತಿದ್ದನು. ನನ್ನ ಮಗ ನಿತಿನ್ ಚಾಲನೆ ಮಾಡುತ್ತಿದ್ದು ಹಿಂಭಾಗದಲ್ಲಿ ಧನುಷ್ ಇದ್ದು, ಆತನ ಹಿಂಭಾಗದಲ್ಲಿ ಕುಶಾಲ್ ಕುಳಿತಿದ್ದನು ಎಂದರೆ ಸರಿ. ನಿತಿನ್ ಮತ್ತು ಧನುಷ್ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಆ ದಿನ ಬೈಕಿನಲ್ಲಿದ್ದ ಮೂವರೂ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಹೇಗೆ ಸಂಭವಿಸಿತು ಎಂದು ಸಾರ್ವಜನಿಕರ ಮೂಲಕ ತಿಳಿದು ಬಂದಿರುತ್ತದೆ. ನಾಗರಾಜುರವರಿಗೆ ಅಪಘಾತ ಹೇಗೆ ಸಂಭವಿಸಿತು ಎಂದು ಗೊತ್ತಿಲ್ಲ ಮತ್ತು ಅಪಘಾತವನ್ನು ಕಣ್ಣಾರೆ ನೋಡಿಲ್ಲ,

ಆದರೆ ಗ್ರಾಮಸ್ಥರಿಂದ ತಿಳಿದುಕೊಂಡಿರುತ್ತಾರೆ. ನಿತಿನ್ ಚಾಲನೆ ಮಾಡುತ್ತಿದ್ದ ಬೈಕು ನನಗೆ ಸೇರಿತ್ತು. ನಿಪಿ 9 ಅನ್ನು ನನ್ನ ವಿರುದ್ದವೂ ಸಹ ಸಲ್ಲಿಸಲಾಗಿದೆ ಎಂದರೆ ಸರಿ. ಬೈಕಿನಲ್ಲಿ ಹೋಗುತ್ತಿದ್ದ ಮೂವರೂ ಸಹ ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ವಾಹನ ಚಾಲನೆ ಮಾಡುತ್ತಿದ್ದ ನನ್ನ ಮಗ ನಿತಿನ್ ರವರ ವಿರುದ್ದವೂ ಸಹ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿ. ನನ್ನ ಮಗ ಕೆಲವು ಬಾರಿ ನನ್ನ ಬೈಕನ್ನು ಶಾಲೆಗೆ ಶೆಗೆದುಕೊಂಡು ಹೋಗುತ್ತಿದ್ದನು, ಆದರೆ ಪ್ರತಿದಿನವೂ ಅಲ್ಲ. ಸಾಮಾನ್ಯವಾಗಿ ನನ್ನ ಮಗ ಶಾಲೆಗೆ ಸೈಕಲ್ ನಲ್ಲಿ ಹೋಗುತ್ತಿದ್ದನು. ಅಪಘಾತದ ದಿನ ನನ್ನ ಮಗ ಬೆಳಿಗ್ಗೆ 9.45 ಗಂಟೆಯ ಸಮಯದಲ್ಲಿ ಮನೆಯಿಂದ ಹೊರಟನು. ಆ ಸಮಯದಲ್ಲಿ ನನ್ನ ಗಂಡ ಮತ್ತು ನಾನು ಮನೆಯಲ್ಲಿ ಇರಲಿಲ್ಲ, ಆದರೆ ನನ್ನ ಮಗಳು ಇದ್ದಳು. ಆ ದಿನ ನನ್ನ ಮಗಳು ಕಾಲೇಜಿಗೆ ಹೋಗಿರಲಿಲ್ಲ. ನನ್ನ ಮಗಳು ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಆಕೆಗೆ 17 ವರ್ಷ ವಯಸ್ಸು ಆಗಿರುತ್ತದೆ. ಆ ದಿನ ನನಗೆ ಸೇರಿದ ಬೈಕಿನಲ್ಲಿ ನನ್ನ ಮಗ ಶಾಲೆಗೆ ಹೋಗಿರುತ್ತಾನೆ. ಈ ವಿಚಾರವನ್ನು ನನ್ನ ಮಗಳು ನನಗೆ ತಿಳಿಸಿರಲಿಲ್ಲ. ಸಾಮಾನ್ಯವಾಗಿ ಬೆಳಿಗ್ಗೆ 9.30 ಗಂಟೆಯ ಸಮಯಕ್ಕೆ ನನ್ನ ಗಂಡ ನನ್ನ ಮಗನನ್ನು ಶಾಲೆಗೆ ಬಿಡುತ್ತಿದ್ದರು. ನನ್ನ ಗಂಡ ಮತ್ತು ನಾನು ಕೆಲಸಕ್ಕೆ ಹೋಗುವ ಸಮಯದಲ್ಲಿಯೇ ನನ್ನ ಮಗನೂ ಸಹ ನಮ್ಮೊಂದಿಗೆ ಶಾಲೆಗೆ ಹೊರಡುತ್ತಿದ್ದನು ಎಂದರೆ ಸರಿಯಲ್ಲ. ರಜಾ ದಿನಗಳಲ್ಲಿ ನನ್ನ ಮಗ ಬೈಕ್ ಚಾಲನೆ ಮಾಡುತ್ತಿದ್ದನು. ನನ್ನ ಮಗ ಅಪ್ರಾಪ್ತ ವಯಸ್ಕನಾದ ಕಾರಣ ವಾಹನ ಚಾಲನೆ ಮಾಡಬಾರದು ಎಂಬ ವಿಚಾರ ನನಗೆ ತಿಳಿದಿರುತ್ತದೆ. ಆ ರೀತಿ ತಿಳುವಳಿಕೆ ಇರುವ ಕಾರಣ ವಾಹನದ ಕೀಯನ್ನು

ಆತನಿಗೆ ಸಿಗದಂತೆ ಇಡುವುದು ನನ್ನ ಜವಾಬ್ದಾರಿ ಆಗಿರುತ್ತದೆ ಎಂದರೆ ಸರಿ. ನಾನು 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದು, ಶೇಷಾದ್ರಿ ಪುರಂ ಶಾಲೆಯಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತೇನೆ. ನನ್ನ ಮಗ ನಿತಿನ್ ಗೆ ವಾಹನ ಚಾಲನೆ ಮಾಡಲು ಬಾರದ ಕಾರಣ ಮತ್ತು ಚಾಲನಾ ಪರವಾನಗಿ ಇಲ್ಲದ ಪರಿಣಾಮ ಆತನ ಅಜಾಗರೂಕತೆಯಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ನನ್ನ ಮಗನ ಅಜಾಗರೂಕತೆಯಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸ್ ದಾಖಲಾತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. 4 ರಸ್ತೆ ಸೇರುವ ಮಾರ್ಗದ ಮಧ್ಯಭಾಗದಲ್ಲಿ ಅಪಘಾತ ಸಂಭವಿಸಿದೆ ಎಂದು ನಿಪಿ 5 ರಲ್ಲಿ ತೋರಿಸಲಾಗಿದೆ ಎಂದರೆ ಸರಿ. ಬೈಕು ಜಿಂಕ್ ಶೀಟ್ ಕಾಂಪೌಂಡ್ ಗೆ ಅಪ್ಪಳಿಸಿದ ಪರಿಣಾಮ ಗಾಯಗಳು ಆಗಿರುತ್ತದೆ ಎಂದು ನಿಪಿ 3 ರಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮಗ ಅಪಘಾತದ ನಂತರ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿರುತ್ತಾನೆ. ಚಿಕಿತ್ಸೆಗೆ ನಾನು ಹೇಳಿರುವಷ್ಟು ಹಣ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗೆ ತಗುಲಿದ ವೆಚ್ಚಗಳು ಮರುಪಾವತಿಯಾಗಿದೆ ಎಂದರೆ ಸಾಕ್ಷಿಯು ಆಪಾದಿತ ವಾಹನದ ಮಾಲೀಕರು ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ ಉಂಟಾದ ಗಾಯಗಳು ಈಗ ವಾಸಿಯಾಗಿವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸ್ವಲ್ಪ ಉಸಿರಾಟದ ಸಮಸ್ಯೆ ಇದೆ ಎಂದು ನುಡಿಯುತ್ತಾರೆ. ಈಗ ನನ್ನ ಮಗ 10ನೇ

ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಅಪಘಾತದಿಂದ ನನ್ನ ಮಗನ ವಿದ್ಯಾಭ್ಯಾಸಕ್ಕೆ ತೊಂದರೆ ಆಗಿರುವುದಿಲ್ಲ. ನನ್ನ ಮಗ ಕ್ರೀಡೆಯಲ್ಲಿ ಭಾಗವಹಿಸುತ್ತಿದ್ದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರಮಾಣ ಪತ್ರದ ಖಂಡಿಕೆ 5 5ನೇ ಪುಟದಲ್ಲಿ ಹೇಳಿರುವ ತೊಂದರೆಗಳಿಗೆ ಸಂಬಂಧಿಸಿದಂತೆ ವೈದ್ಯರ ಬಳಿ ಸಲಹೆ ಪಡೆದಿದ್ದೇವೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ನಾಗರಾಜುರವರು ಪೊಲೀಸರೊಂದಿಗೆ ಶಾಮೀಲಾಗಿ ಆಪಾದಿತ ವಾಹನದ ಚಾಲಕನ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**